# ಶಾಹುಮಹಾರಾಜರ ಸುಧಾರಣೆಗಳು ಹಾಗೂ ಪರಿಣಾಮಗಳು

**ಅರುಣ ಚಿ. ಕಲ್ಲೋಳಿಕರ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ.

DOI: https://doi.org/10.5281/zenodo.17295869

## ABSTRACT:

ಜಗತ್ತಿನಲ್ಲಿ ಗೌತಮ ಬುದ್ಧನಿಂದ ಪ್ರಾರಂಭವಾದ ಸಾಮಾಜಿಕ, ಧಾರ್ಮಿಕ ಸುಧಾರಣಾ ಚಳುವಳಿ, ನಂತರ ಬಸವೇಶ್ವರ, ಜ್ಯೋತಿಭಾ ಫುಲೆ, ನಾರಾಯಣ ಗುರು, ಪೆರಿಯಾರ ರಾಮಸ್ವಾಮಿ ಅಯ್ಯಂಗಾರ, ಶಾಹೂಮಹಾರಾಜ, ಸಯ್ಯಾಜಿರಾವ್ ಗಾಯಕವಾಡ ಹಾಗೂ ಡಾ. ಅಂಬೇಡ್ಕರರ ವರೆಗೆ ಮುಂದುವರೆದು, ಆಧುನಿಕ ಭಾರತ ನಿರ್ಮಿಸುವಲ್ಲಿ ಈ ಚಳುವಳಿ ಪ್ರಮುಖ ಪಾತ್ರ ವಹಿಸಿತು. ಹಿಂದೂ ಧಾರ್ಮಿಕ ಸಾಮಾಜಿಕ ಶೋಷಣೆಯ ವಿರುದ್ಧ, ಮೌಢ್ಯತೆಗಳ ವಿರುದ್ಧ ತಮ್ಮ ರಾಜ್ಯದಲ್ಲಿ ಸಾಮಾಜಿಕ, ಧಾರ್ಮಿಕ ಸುಧಾರಣಾ ಚಳುವಳಿ ಪ್ರಾರಂಭಿಸಿದರು. ಈ ಸುಧಾರಣೆಗೆ ಮೂಲ ಪ್ರೇರಣೆಯಾದದ್ದು ಜ್ಯೋತಿಭಾ ಪುಲೆ ಅವರ ಚಳುವಳಿ. ಇವರು ಅಂಬೇಡ್ಕರ ಅವರಿಗೆ ನೀಡಿದ ಸಹಾಯದಿಂದ ಭಾರತದ ಶ್ರೇಷ್ಠವಾದ ಸಂವಿಧಾನ ರಚಿಸಲು ಸಾಧ್ಯವಾಯಿತು. ಶಾಹುಮಹಾರಾಜರ ಮೂಲ ಹೆಸರು "ಯಶವಂತರಾವ್". ಕೊಲ್ಲಾಪೂರ ಸಂಸ್ಥಾನದ ರಾಜ ನಾಲ್ವಡಿ ಶಿವಾಜಿ ತೀರಿಕೊಂಡ ನಂತರ ಆತನಿಗೆ ಮಕ್ಕಳಿರಲಿಲ್ಲ. (ಇತನ ಹೆಂಡತಿ ಆನಂದಿಬಾಯಿ). ಇಂತಹ ಸಂದರ್ಭದಲ್ಲಿ ಕೊಲ್ಲಾಪುರ ರಾಜಮನೆತನದ ದೂರದ ಸಂಬಂಧಿಯಾದ ಕಾಗಲ್ ಪ್ರದೇಶದ ಮುಖ್ಯಸ್ಥನಾದ ಅಪ್ಪಾಸಾಹೇಬ ಜಯಸಿಂಗ್‌ರಾವ್ ಘಾಟಗೆರವರು ಮುಧೋಳ ಸಂಸ್ಥಾನದ ರಾಧಾಬಾಯಿಯನ್ನು ವಿವಾಹವಾಗಿದ್ದರು. ಈ ದಂಪತಿಗಳಿಗೆ 1874 ರಲ್ಲಿ ಯಶವಂತರಾವ್ ಎಂಬ ಮಗ ಜನ್ಮತಾಳಿದನು. ಆತನು 10 ವರ್ಷದವನಿದ್ದಾಗ ಕೊಲ್ಲಾಪುರ ಸಂಸ್ಥಾನದ ರಾಣಿ ಆನಂದಿಬಾಯಿ 1884 ರಲ್ಲಿ ಯಶವಂತರಾವ್‌ನನ್ನು ದತ್ತು ಪಡೆದುಕೊಂಡಳು. ಆತನಿಗೆ ಶಾಹುಮಹಾರಾಜ ಎಂದು ಮರುನಾಮಕರಣ ಮಾಡಿದಳು. ಆನಂತರ ಕೊಲ್ಲಾಪುರ ಸಂಸ್ಥಾನದ ರಾಜನ್ನಾಗಿ ಮಾಡಿದರು. ಪ್ರಾರಂಭದಲ್ಲಿ ಶಾಹುಮಹಾರಾಜರಿಗೆ ಒಳ್ಳೆಯ ಶಿಕ್ಷಣ ನೀಡಲಾಯಿತು. ಕೇಶವರಾವ ಗೋಖಲೆ ಮತ್ತು ರಘುನಾಥರಾವ್ ಸಬನಿಸ್ ಅವರು ಪ್ರಾರಂಭಿಕ ಶಿಕ್ಷಣ ನೀಡಿದರು. ನಂತರ 1889 ರಿಂದ 1892ರ ಕಾಲಘಟ್ಟದಲ್ಲಿ ಶಾಹು ಅವರ ಶಿಕ್ಷಣವು ಧಾರವಾಡದಲ್ಲಿ "ಸರ್ ಸ್ಟೂವರ್ಟ್ ಫ್ರೇಜರ್" ಅವರ ಉಸ್ತುವಾರಿಯಲ್ಲಿ ನಡೆಯಿತು.

## KEYWORDS:

ಅನಿಷ್ಠ ಪದ್ಧತಿಗಳು, ಅಸ್ಪೃಶ್ಯತೆ, ಸಮುದಾಯ, ಶೋಷಿತರಿಗೆ, ಮೀಸಲಾತಿ

### 1) ಸಾಮಾಜಿಕ ಸುಧಾರಣೆಗಳು :

- ಶಾಹುಮಹಾರಾಜರು ವೈದಿಕರ ಸಮಾಜದಲ್ಲಿರುವ ವರ್ಣವ್ಯವಸ್ಥೆ, ಜಾತಿ, ಅಸ್ಪೃಶ್ಯತೆ, ಬಾಲ್ಯವಿವಾಹ, ಹೆಣ್ಣು ಶಿಶು ಹತ್ಯೆ, ಸತಿ ಪದ್ಧತಿ, ವಿಧವಾ ವಿವಾಹ ನಿರ್ಬಂಧ, ದೇವದಾಸಿ ಪದ್ಧತಿ ಮುಂತಾದ ಸಾಮಾಜಿಕ ಅನಿಷ್ಟ ಪದ್ಧತಿಗಳು, ಮೌಢ್ಯತೆಗಳು, ಸಂಪ್ರದಾಯ, ಪರಂಪರೆ ಮುಂತಾದ ಪದ್ಧತಿಗಳ ವಿರುದ್ಧ ಸಾಮಾಜಿಕ ಸುಧಾರಣಾ ಚಳುವಳಿ ಪ್ರಾರಂಭಿಸಿ ಸಮಾನತೆಯನ್ನು ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಇದಕ್ಕೆ ಮೂಲ ಪ್ರೇರಣೆ ಜ್ಯೋತಿಭಾ ಪುಲೆ ಅವರ ವಿಚಾರಗಳು, ಅವರು ಸ್ಥಾಪಿಸಿದ ಸತ್ಯಶೋಧಕ ಸಮಾಜದ ಕಾರ್ಯಗಳು.
- ಶಾಹುಮಹಾರಾಜರು 1901 ರಲ್ಲಿ ದಲಿತ ವರ್ಗದವರ ಜನಗಣತಿ ಮಾಡಿಸಿ ಈ

ಜನಗಣತಿಯಿಂದ ಅವರ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು ಹಲವಾರು ಸುಧಾರಣೆಗಳನ್ನು ಕೈಗೊಂಡರು. ಆಗ ಒಟ್ಟು ದಲಿತರ ಜನಸಂಖ್ಯೆ 1,03,889 ಆಗಿತ್ತು (20% ರಷ್ಟು). ಶಾಹುಮಹಾರಾಜರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಆ ಶಿಕ್ಷಣ ಸಂಸ್ಥೆಗಳ ಮುಖಾಂತರ ಬ್ರಾಹ್ಮಣೇತರರಿಗೆಲ್ಲರಿಗೂ ಶಿಕ್ಷಣವನ್ನು ನೀಡಿದರು.

- ಶಾಹುಮಹಾರಾಜರು ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಹಲವಾರು ಕಾನೂನುಗಳನ್ನು ಜಾರಿಗೆ ತಂದರು. ಕೆರೆ, ಬಾವಿ, ಧರ್ಮಶಾಲೆ, ನದಿ, ಆಸ್ಪತ್ರೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆ ಆಚರಣೆ ಮಾಡುವುದು ಅಪರಾಧವೆಂದು ತಿಳಿಸಿ 1919 ಸೆಪ್ಟೆಂಬರ್ 06 ರಂದು ಕಾನೂನು ಜಾರಿಗೆ ತಂದು ಅದರ ಪ್ರತಿಯನ್ನು ಆ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿದರು.
- ಶಾಹುಮಹಾರಾಜರು ಸರ್ಕಾರಿ ವಕೀಲರನ್ನಾಗಿ ಅಸ್ಪೃಶ್ಯ ಸಮುದಾಯದವರನ್ನು ನೇಮಕ ಮಾಡಿಕೊಂಡರು. ತಮ್ಮ ಮನೆ ಕೆಲಸಕ್ಕೆ ಹಾಗೂ ರಥದ ಸಾರಥಿಯರನ್ನಾಗಿ, ವಾಹನ ಚಾಲಕರನ್ನಾಗಿ, ಆಡಳಿತದ ವಿವಿಧ ಹುದ್ದೆಗಳಿಗೆ ಆ ಶೋಷಿತ ಸಮುದಾಯದವರನ್ನು ನೇಮಕ ಮಾಡಿಕೊಂಡರು ಹಾಗೂ ಅವರಿಗೆ ಸೇವಕರ ವೇಷಭೂಷಣಗಳನ್ನು ಹಾಕಿ ಕೈಯಲ್ಲಿ ಕತ್ತಿ ನೀಡಿ ಅರಮನೆಯ ರಾಣಿಯ ಕಾವಲುಗಾರರನ್ನಾಗಿ ನೇಮಕ ಮಾಡಿದರು.
- ಶಾಹುಮಹಾರಾಜರು 1919 ರಲ್ಲಿ ಒಂದು ಕಾನೂನು ಜಾರಿಗೆ ತಂದು ಸಾರ್ವಜನಿಕ ಆಡಳಿತ ಕ್ಷೇತ್ರವಾದ ಕಂದಾಯ, ನ್ಯಾಯಾಂಗ ಮುಂತಾದ ಇಲಾಖೆಗಳಲ್ಲಿ ಅಸ್ಪೃಶ್ಯರನ್ನು ಸಮಾನತೆಯಿಂದ ಕಾಣಬೇಕೆಂದು ಆದೇಶ ಹೊರಡಿಸಿ ಅದನ್ನು ಸಾರ್ವಜನಿಕ ಇಲಾಖೆಗಳಲ್ಲಿ ಅಂಟಿಸಿದರು. ಸಮಾನತೆಯಿಂದ ಕಾಣಲು ಬ್ರಾಹ್ಮಣ ವರ್ಗದವರಿಗೆ ಯಾರಿಗೆ ಆಗುವುದಿಲ್ಲವೋ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಹೋಗಲು ಆದೇಶಿಸಿದರು. ಅವರಿಗೆ ಪಿಂಚಣಿಯನ್ನು ನೀಡಿದರು.
- ಶಾಹುಮಹಾರಾಜರು 1920-21 ರಲ್ಲಿ ಶೋಷಿತರಿಗೆ ಮುನ್ಸಿಪಾಲಿಟಿಯಲ್ಲಿ ಪ್ರಾತಿನಿಧ್ಯ ನೀಡಿ ಪ್ರಥಮ ಬಾರಿಗೆ ಚಮ್ಮಾರ ಸಮುದಾಯಕ್ಕೆ ಸೇರಿದವರನ್ನು ಅಧ್ಯಕ್ಷರನ್ನಾಗಿ ಮಾಡಿದರು.
- 1918 ಫೆಬ್ರುವರಿಯಲ್ಲಿ ವಂಶಪಾರಂಪರ್ಯವಾಗಿ ಬಂದ ವತನವನ್ನು (ಕೆಲಸ) ನಿಲ್ಲಿಸಿದರು. ಕುಲಕರ್ಣಿ, ಜೋಶಿ, ಶಾನುಭೋಗ, ಮರಾಠರು ಮುಂತಾದ ವತನಗಳನ್ನು ನಿಷೇಧಿಸಿದರು. 1918 ಜೂನ್ 25 ರಂದು ರೈತರಿಗೆ ಮಹಾರರ ಮೇಲೆ ಯಾವುದೇ ಅಧಿಕಾರವಿಲ್ಲ, ಅವರು ಯಾವುದೇ ಕೆಲಸವನ್ನು ಕಡ್ಡಾಯ ಮಾಡುವಂತಿಲ್ಲ, ಅವರು ಬೇರೆ ಕೆಲಸ ಮಾಡಿದರೆ ಅವರನ್ನು ಬಹಿಷ್ಕಾರ ಹಾಕುವಂತಿಲ್ಲ, ಒಂದು ವೇಳೆ ಯಾರಾದರೂ ಬಹಿಷ್ಕಾರ ಹಾಕಿದರೆ ನಾಲ್ಕು ದಿನ ಜೈಲು ಶಿಕ್ಷೆ, 100 ರೂ. ದಂಡವನ್ನು ಕೊಡಬೇಕೆಂದು ಆದೇಶ ಹೊರಡಿಸಿದರು. ಅವರ ಕೆಲಸವನ್ನು ಅವರೇ ಮಾಡಬೇಕೆಂದು ಆದೇಶಿಸಿದರು.
- ಶಾಹುಮಹಾರಾಜರು 1920 ಜುಲೈ 10 ರಂದು ಒಂದು ಕಾನೂನು ಜಾರಿಗೆ ತಂದು ರಾಜನ ದರ್ಬಾರ್ ಹಾಲ್, ರಾಜ-ರಾಣಿ, ಯುವರಾಜ-ಯುವರಾಣಿಯರ ಸೇವೆಗಾಗಿ ಶೋಷಿತ ಸಮುದಾಯದವರನ್ನು ನೇಮಕ ಮಾಡಿದರು. ಶಾಹುಮಹಾರಾಜರು ಹೊಸ

ಕಾನೂನು ಜಾರಿಗೆ ತಂದು ಪ್ರಾಣಿ, ಪಕ್ಷಿ, ಮನುಷ್ಯರು ಸತ್ತರೆ ಅವರನ್ನು ಎಲ್ಲಾ ಸಮುದಾಯದವರು ಸಮಾಧಿ ಮಾಡಬೇಕೆಂದು ಆದೇಶಿಸಿದರು. 1960 ರಲ್ಲಿ ವತನ ಪದ್ಧತಿ ರದ್ದಾಯಿತು. 1975 ರಲ್ಲಿ ಜೀತ ಪದ್ಧತಿ ರದ್ದಾಯಿತು.

- ಆ ಸಂಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜನರು ಯಾವುದೇ ಕೆಲಸ ಕಾರ್ಯವಿಲ್ಲದೇ ಬೇರೆ-ಬೇರೆ ರಾಜ್ಯಗಳಿಗೆ ಹೋಗಿ ದರೋಡೆಯನ್ನು ಮಾಡಿ ಅನಿವಾರ್ಯವಾಗಿ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದರು. ಇದನ್ನು ತಿಳಿದುಕೊಂಡ ಮಹಾರಾಜರು ಆ ಜನರಿಗೆ ಆಶ್ರಯ ನೀಡಿ 1912 ರಲ್ಲಿ ಕೊಲ್ಹಾಪುರದಲ್ಲಿ ಅವರಿಗೆ ಮನೆ ಕಟ್ಟಿಕೊಳ್ಳಲು ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಅವರಿಗೆ ರಸ್ತೆ, ಆಣೆಕಟ್ಟು, ಕೆರೆ-ಬಾವಿ ಮುಂತಾದ ಕೆಲಸ ಕಾರ್ಯಗಳಿಗೆ ಅವರನ್ನು ನೇಮಕ ಮಾಡಿಕೊಂಡರು. ಆ ಸಂದರ್ಭದಲ್ಲಿ 23 ಕುಟುಂಬಗಳಿಗೆ ಮನೆ ಕಟ್ಟಿಕೊಟ್ಟರು.
- 1919 ರಲ್ಲಿ ಆದೇಶ ಹೊರಡಿಸಿ ಶಿಕ್ಷಣ ಇಲಾಖೆಗಳಲ್ಲಿ ಅಸ್ಪೃಶ್ಯರನ್ನು ಸಮಾನತೆಯಿಂದ ಕಾಣಲು ಆದೇಶ ಹೊರಡಿಸಿದರು.
- 1919 ಜುಲೈ 12 ರಿಂದ ಅಂತರ್ಜಾತಿ ವಿವಾಹ ಕಾಯಿದೆ ಜಾರಿಗೆ ತಂದರು.
- 1920 ಜುಲೈ 17 ರಂದು ದೇವದಾಸಿ ಪದ್ಧತಿ ನಿರ್ಬಂಧ ಕಾಯ್ದೆ ಜಾರಿಗೆ ತಂದರು.
- 1920 ಏಪ್ರಿಲ್ 16 ರಂದು ನಾಸಿಕ್‌ನಲ್ಲಿ ಡಿಪ್ರೆಸ್ಡ್ ಕ್ಲಾಸ್ ಸಮ್ಮೇಳನದಲ್ಲಿ ಭಾಗವಹಿಸಿ ಹಲವಾರು ಸಲಹೆಗಳನ್ನು ನೀಡಿದರು.
- 1920ರ ಮೇ 30 ರಂದು ನಾಗ್ಪುರದಲ್ಲಿ ರಾಜರು ಸ್ವತಃ ಡಿಪ್ರೆಸ್ಡ್ ಕ್ಲಾಸ್ ಸಮ್ಮೇಳನವನ್ನು ಆಯೋಜಿಸಿ ಶೋಷಿತರಿಗೆ ಶಿಕ್ಷಣ ಹಾಗೂ ಸಬಲೀಕರಣದ ಬಗ್ಗೆ ತಿಳಿಸಿದರು.
- 1919 ರಲ್ಲಿ ಅಸ್ಪೃಶ್ಯ ಆಚರಣೆಯ ವಿರುದ್ಧ ಕಾನೂನು ಜಾರಿಗೆ ತಂದು ಗಂಗಾರಾಮ ಕಾಂಬ್ಳೆ ಎಂಬುವವರಿಗೆ ಧನ ಸಹಾಯ ಮಾಡಿ ಅವರ ಕೋಟೆಯ ಮುಖ್ಯ ದ್ವಾರದ ಹತ್ತಿರ ಉಪಹಾರ ಗೃಹವನ್ನು ನಿರ್ಮಿಸಿಕೊಟ್ಟು ಸ್ವತಃ ರಾಜರೇ ಅಲ್ಲಿ ಉಪಹಾರ ಸೇವಿಸುತ್ತಿದ್ದರು. ಇದೇ ರೀತಿಯಾಗಿ ಶೋಷಿತ ನಗರಗಳಿಗೆ ಭೇಟಿ ನೀಡಿ ಅಲ್ಲಿಯ ಸಮಸ್ಯೆಗಳನ್ನು ಪರಿಹರಿಸಿ ಅಲ್ಲಿ ಉಪಹಾರ ಸೇವಿಸುತ್ತಿದ್ದರು.
- 1922 ಫೆಬ್ರುವರಿ 22 ರಂದು ದೆಹಲಿಯಲ್ಲಿ ಅಖಿಲ ಭಾರತ ಶೋಷಿತ ಸಮ್ಮೇಳನವನ್ನು ಆಯೋಜಿಸಿ ಶೋಷಿತರಿಗೆ ಶಿಕ್ಷಣದ ಮಹತ್ವ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಮಾನತೆಯ ಮಹತ್ವವನ್ನು ತಿಳಿಸಿಕೊಟ್ಟರು.
- 1920 ಜುಲೈ 26 ರಂದು ಭಾರತದಲ್ಲೇ ಪ್ರಥಮ ಬಾರಿಗೆ ಹಿಂದುಳಿದ ವರ್ಗದವರಿಗೆ ಹಾಗೂ ಶೋಷಿತರಿಗೆ ಶೇ. 50ರಷ್ಟು ಮೀಸಲಾತಿ ಜಾರಿಗೆ ತಂದರು. ಇದನ್ನು ವಿರೋಧಿಸಿ ಬಾಲಗಂಗಾಧರ ತಿಲಕ ಅವರು ರಾಜರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದರು. ಆದರೆ ಇದಕ್ಕೆ ಹೆದರದೇ ರಾಜರು ಮೀಸಲಾತಿಯನ್ನು ಜಾರಿಗೊಳಿಸಿದರು. ಡಾ. ಅಂಬೇಡ್ಕರವರ ವಿದೇಶಿ ಶಿಕ್ಷಣಕ್ಕೆ ಸಹಾಯ ಮಾಡಿ ಮಾನಗಾಂವ್ ಮಹಾರ ಸಮ್ಮೇಳನದಲ್ಲಿ ಮಾರ್ಚ್ 21, 1920 ರಂದು ಶಾಹು ಮಹಾರಾಜರು ಈ ಸಮ್ಮೇಳನದಲ್ಲಿ ಡಾ. ಅಂಬೇಡ್ಕರವರನ್ನು ಜಗತ್ತಿಗೆ ಪರಿಚಯಿಸಿಕೊಟ್ಟು ಇನ್ನು ಮುಂದೆ ಸಾಮಾಜಿಕ ಪರಿವರ್ತನೆಯ ಚಳುವಳಿಯನ್ನು ಭಾರತದ ತುಂಬಾ ಅಂಬೇಡ್ಕರವರು ಮುನ್ನಡೆಸಿಕೊಂಡು ಹೋಗುತ್ತಾರೆಂದು ಕರೆ ನೀಡಿದರು ಹಾಗೂ ಅವರ ಮೂಕನಾಯಕ

ಪತ್ರಿಕೆಗೆ 250 ರೂ.ಗಳನ್ನು ಧನ ಸಹಾಯ ಮಾಡಿದರು.

- ಮುಂಬೈ ಗವರ್ನರ್ ಸರ್ ಜಾರ್ಜ್ ಸಿಡನ್‌ಹ್ಯಾಮ್ ಕರ್ಕ್ ಅವರ ಮಗಳು ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮವನ್ನು ಆಯೋಜಿಸಲು ಧನ ಸಹಾಯಕ್ಕಾಗಿ ಸಂಗೀತ ಕಾರ್ಯಕ್ರಮ ಆಯೋಜಿಸಿದ್ದಳು. ಈ ಕಾರ್ಯಕ್ರಮಕ್ಕೆ ರಾಜರು 200 ರೂ.ಗಳನ್ನು ದೇಣಿಗೆಯಾಗಿ ನೀಡಿದ್ದರು. ಆದರೆ ಅವಳು ಆಕಸ್ಮಿಕ ಮರಣವನ್ನು ಹೊಂದಿದಳು. ಅವಳ ಹೆಸರಿನಲ್ಲಿ ಒಂದು ಹಿಂದುಳಿದ ವಸತಿ ನಿಲಯವನ್ನು ಸ್ಥಾಪಿಸಿದರು. ಭೂಹೀನರಿಗೆ ಉಚಿತವಾಗಿ ಭೂಮಿಯನ್ನು ನೀಡಿದರು.

**2) ಧಾರ್ಮಿಕ ಸುಧಾರಣೆಗಳು :**

- ಶಾಹು ಅವರು ಹಿಂದೂ ಧಾರ್ಮಿಕ ವ್ಯವಸ್ಥೆಯಲ್ಲಿನ ಅನಿಷ್ಟ ಪದ್ಧತಿಗಳನ್ನು, ಧಾರ್ಮಿಕ ಮೌಢ್ಯತೆಗಳನ್ನು, ಬ್ರಾಹ್ಮಣರ ಶ್ರೇಷ್ಠತೆಯನ್ನು ಹಾಗೂ ದೇವರು, ಧರ್ಮ, ಕರ್ಮಸಿದ್ಧಾಂತದ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ಖಂಡಿಸಿ ಧಾರ್ಮಿಕ ಸುಧಾರಣಾ ಚಳುವಳಿ ಮಾಡಿದರು. ಸ್ವತಃ ರಾಜರೇ ಬ್ರಾಹ್ಮಣರಿಂದ ಅವಮಾನಿತರಾಗಿದ್ದರಿಂದ ಜನಸಾಮಾನ್ಯರ ಸ್ಥಿತಿ ಏನು ಎಂದು ಆಲೋಚನೆ ಮಾಡಿ ಧಾರ್ಮಿಕ ಸುಧಾರಣಾ ಕಾರ್ಯ ಕೈಗೊಂಡರು.
- ತಮ್ಮ ಅರಮನೆಯಲ್ಲಿರುವ ನೂರಾರು ಪುರೋಹಿತರನ್ನು ತಮಗೆ ಆದ ಅಪಮಾನದಿಂದ ಹೊರಹಾಕಿದರು. ಎಲ್ಲರಿಗೂ ಪುರೋಹಿತ ತರಬೇತಿ ನೀಡಿ ಅವರೇ ಪೂಜೆಗಳನ್ನು ಮಾಡಿಕೊಳ್ಳಬೇಕು, ಈ ರೀತಿಯಾಗಿ ಧಾರ್ಮಿಕ ಸಮಾನತೆ ಪ್ರತಿಪಾದಿಸಿದರು.
- ಶಿವಾಜಿ ಕಾಲದಿಂದಲೂ ಮರಾಠಾ ಸಾಮ್ರಾಜ್ಯದಲ್ಲಿ ಬ್ರಾಹ್ಮಣರು ಪ್ರಮುಖ ಸ್ಥಾನ ಪಡೆದಿದ್ದರು. ಪ್ರತಿಯೊಂದು ಕೆಲಸ ಕಾರ್ಯದಲ್ಲಿ ಅವರೇ ಪ್ರಮುಖರಾಗಿದ್ದರು. ರಾಜರು ಯುದ್ಧಕ್ಕೆ ಹೋಗುವಾಗ, ಯುದ್ಧವನ್ನು ಗೆದ್ದಾಗ, ಪಟ್ಟಾಭಿಷೇಕದ ಸಮಯದಲ್ಲಿ ರಾಜ್ಯದ ಮಹತ್ವ ಕಾರ್ಯಗಳನ್ನು ಪ್ರಥಮ ಬಾರಿಗೆ ಬ್ರಾಹ್ಮಣರೇ ನಿರ್ವಹಿಸುತ್ತಿದ್ದರು. ಶಿವಾಜಿ ಪಟ್ಟಾಭಿಷೇಕವನ್ನು ನಿರಾಕರಿಸಿದ್ದರು. 1835 ರಲ್ಲಿ ಸಯ್ಯಾಜಿರಾವ್ ಗಾಯಕ್‌ವಾಡ್, 1901 ರಲ್ಲಿ ಶಾಹು ಮಹಾರಾಜ ಇವರಿಂದ ಅವಮಾನಿತರಾಗಿದ್ದರು. ಕೊನೆಗೆ ಶಾಹು ಅವರು ಪುರೋಹಿತರನ್ನು ತಮ್ಮ ಅರಮನೆಯಿಂದ ಹೊರಗೆ ಹಾಕಿ ಎಲ್ಲರಿಗೂ ಧಾರ್ಮಿಕ ಸಮಾನತೆಯನ್ನು ತಂದುಕೊಡಲು ಧಾರ್ಮಿಕ ಸುಧಾರಣೆಗಳನ್ನು ಮಾಡಿದ್ದರು.
- ಶಾಹು ಅವರು ಧಾರ್ಮಿಕ ಸಮಾನತೆಯನ್ನು ತರಲು ಬ್ರಾಹ್ಮಣೇತರ ವರ್ಗದವರಿಗೆಲ್ಲಾ ವೇದ, ಉಪನಿಷತ್ತು ಕಲಿಸುವ ಶಾಲೆಗಳನ್ನು ಪ್ರಾರಂಭಿಸಿದರು. ಶೂದ್ರರಿಗೂ ಸಹ ವೇದ ಮಂತ್ರಗಳನ್ನು ಕಲಿಸಿದರು. ಈ ಕಾರ್ಯದಿಂದ ಅವರ ಪೂಜಾ, ಧಾರ್ಮಿಕ ಕಾರ್ಯಗಳು ಅವರೇ ನಿರ್ವಹಿಸಲು ಪ್ರಾರಂಭಿಸಿದ್ದರಿಂದ ಬ್ರಾಹ್ಮಣರ ಉದ್ಯೋಗ, ಆದಾಯವೇ ನಿಂತು ಹೋಯಿತು. ಇದರಿಂದ ಭಾರತದಲ್ಲಿ ಪ್ರಥಮ ಬಾರಿಗೆ ಬ್ರಾಹ್ಮಣರ ಮತ್ತು ಬ್ರಾಹ್ಮಣೇತರ ನಡುವೆ ಸಂಘರ್ಷ ಪ್ರಾರಂಭವಾಯಿತು. ಶಾಹುಮಹಾರಾಜರ ವಿರುದ್ಧ ಬ್ರಾಹ್ಮಣರು ಸಂಘರ್ಷ ಪ್ರಾರಂಭಿಸಿದ್ದರು.
- ಶಾಹು ಅವರು ಪುರೋಹಿತರಿಗೆ ನೀಡಿದ್ದ ವಿಶೇಷ ಸೌಲಭ್ಯಗಳನ್ನು ರದ್ದುಗೊಳಿಸಿದರು. ಅವರಿಗೆ ಇನಾಮಾಗಿ ನೀಡಿದ ಭೂಮಿಯನ್ನು ಕಸಿದುಕೊಂಡರು. ಅವರಿಗೆ ನೀಡುತ್ತಿದ್ದ ಭತ್ಯೆಯನ್ನು ನಿಲ್ಲಿಸಿದರು. ಈ ಕ್ರಮದಿಂದ ರಾಜರ ಖಜಾನೆಗೆ 50 ಸಾವಿರ ರೂಪಾಯಿಗಳು

ಉಳಿತಾಯವಾದವು.

**3) ಶೈಕ್ಷಣಿಕ ಸುಧಾರಣೆಗಳು :**

- ಶಾಹು ಅವರು ತಮ್ಮ ರಾಜ್ಯದಲ್ಲಿ ಶೈಕ್ಷಣಿಕ ಸುಧಾರಣಾ ಕಾರ್ಯಗಳನ್ನು ಕೈಗೊಂಡರು. ವರ್ಣವ್ಯವಸ್ಥೆಯಿಂದ ಬ್ರಾಹ್ಮಣರನ್ನು ಬಿಟ್ಟರೆ ಬೇರೆಯಾರಿಗೂ ಶಿಕ್ಷಣವಿರಲಿಲ್ಲ. ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕು, ಇದರಿಂದಲೇ ಸಮಾನತೆ ಎಂದು ತಿಳಿದ ರಾಜರು ಎಲ್ಲರಿಗೂ ಶಿಕ್ಷಣ ನೀಡಲು ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದರು.
- ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಹಾಗೂ ಉಚಿತ ಶಿಕ್ಷಣವನ್ನು ನೀಡಿದರು.
- ಶಿಕ್ಷಣಕ್ಕಾಗಿ ಪ್ರತಿವರ್ಷ ಪ್ರತಿಯೊಂದು ಮನೆಗೆ 1 ರೂಪಾಯಿ ತೆರಿಗೆಯನ್ನು ಹಾಗೂ ಶ್ರೀಮಂತರಿಗೆ 12% ತೆರಿಗೆಯನ್ನು ಹಾಕಿದರು. ಈ ಹಣವನ್ನು ಸಂಗ್ರಹಿಸಿ ಶಿಕ್ಷಣ ಸಂಸ್ಥೆಗಳನ್ನು, ವಸತಿ ನಿಲಯಗಳನ್ನು ಸ್ಥಾಪಿಸಿದರು.
- ಶಾಹು ಮಹಾರಾಜರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಅವರಿಗಾಗಿಯೇ ಶಿಕ್ಷಣ ಸಂಸ್ಥೆ, ವಸತಿ ನಿಲಯ ಸ್ಥಾಪಿಸಿದರು. ಶೂದ್ರ, ಅಸ್ಪೃಶ್ಯ ವರ್ಗದವರಿಗೆ 20 ವಸತಿ ನಿಲಯ ಸ್ಥಾಪಿಸಿದರು. ಹಿಂದುಳಿದ ವಿದ್ಯಾರ್ಥಿನಿಯರಿಗೆ ವಸತಿ ನಿಲಯ ಸ್ಥಾಪಿಸಿದರು. ಶಾಹುಮಹಾರಾಜರು ಗ್ರಾಮಲೆಕ್ಕಿಗ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ, ಅಲ್ಲಿ ಶೋಷಿತರಿಗೆ ತರಬೇತಿಗಳನ್ನು ನೀಡಿ ಅವರನ್ನು ಗ್ರಾಮಾಧಿಕಾರಿಗಳನ್ನಾಗಿ ನೇಮಕ ಮಾಡಿದರು. ಈ ಹಿಂದೆ ಪುರೋಹಿತ ವರ್ಗದವರು, ಕುಲಕರ್ಣಿ, ಶಾನುಭೋಗರು, ದೇಸಾಯರು ಕಾರ್ಯ ನಿರ್ವಹಿಸುತ್ತಿದ್ದರು.
- ಶೋಷಿತರ ಶಿಕ್ಷಣಕ್ಕಾಗಿಯೇ ಒಂದು ಶಿಕ್ಷಣ ಪ್ರತಿಷ್ಠಾನವನ್ನು ಸ್ಥಾಪಿಸಿ ಈ ಸಂಸ್ಥೆಯ ಸದಸ್ಯರು ಬ್ರಿಟಿಷರ ಕಾಲದ ರಾಜಕೀಯ ಪ್ರತಿನಿಧಿ ಮೇಜರ್ ವುಡ್ ಹೌಸ್ ಆಗಿದ್ದರು. ಇದರ ಮುಖಾಂತರ ಹಲವಾರು ಶೈಕ್ಷಣಿಕ ಸುಧಾರಣೆಗಳನ್ನು ಕೈಗೊಂಡರು. ಹಿಂದುಳಿದ ವರ್ಗದವರಿಗೆ 28 ಶಾಲೆಗಳನ್ನು ಸ್ಥಾಪಿಸಿ ಉಚಿತ ಶಿಕ್ಷಣ ನೀಡಿದರು.
- ಮುಸ್ಲಿಂರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದರು. 1906 ರಲ್ಲಿ ಮೊಹಮ್ಮದೀಯನ್ ಎಜ್ಯುಕೇಷನ್ ಸೊಸೈಟಿಯನ್ನು ಸ್ಥಾಪಿಸಿ ಮುಸ್ಲಿಂ ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಮುಸ್ಲಿಂ ವಿದ್ಯಾರ್ಥಿಗಳಿಗೆ ಮರಾಠಾ ಬೋರ್ಡಿಂಗ್ ಹತ್ತಿರ ವಸತಿ ನಿಲಯವನ್ನು ನಿರ್ಮಿಸಲು 5,500 ರೂ.ಗಳನ್ನು ನೀಡಿ ವಾರ್ಷಿಕ 250 ರೂಪಾಯಿಗಳನ್ನು ಅನುದಾನ ನೀಡಿದರು.

**ಪರಿಣಾಮಗಳು**

ಒಟ್ಟಾರೆಯಾಗಿ ಶಾಹುಮಹಾರಾಜರ ಸುಧಾರಣಾ ಚಳುವಳಿಯ ಪರಿಣಾಮದಿಂದ ಕೊಲ್ಲಾಪುರ ರಾಜ್ಯದಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಾನತೆ ಜಾರಿಗೆ ಬರಲು ಸಾಧ್ಯವಾಯಿತು. ಇವರ ಚಳುವಳಿಯ ಪ್ರಭಾವವು ಮೈಸೂರು ರಾಜ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಮೇಲೆ ಹಾಗೂ ತಮಿಳುನಾಡು, ದಕ್ಷಿಣ ಭಾರತದ ತುಂಬಾ ಪ್ರಭಾವ ಬೀರಿ ಹಲವಾರು ರಾಜರು ತಮ್ಮ ರಾಜ್ಯದಲ್ಲಿ ಸುಧಾರಣಾ ಚಳುವಳಿ ಪ್ರಾರಂಭಿಸಿದರು. ಅತ್ಯಂತ ಪ್ರಮುಖವಾಗಿ ರಾಜರು ಡಾ. ಅಂಬೇಡ್ಕರ ಅವರಿಗೆ ಎಲ್ಲಾ ಸಹಕಾರ ನೀಡಿದ್ದರಿಂದ ಅವರು ಜಗತ್ತಿನಲ್ಲಿ ಶ್ರೇಷ್ಠವಾದ ಸಂವಿಧಾನವನ್ನು ಭಾರತಕ್ಕೆ ನೀಡಲು ಸಾಧ್ಯವಾಯಿತು. ಶಾಹುಮಹಾರಾಜರ ಧ್ಯೇಯ, ಉದ್ದೇಶ ಈಡೇರಲು ಹಾಗೂ ಭಾರತದಲ್ಲಿ ಏಕತೆ, ಸಮಾನತೆ, ಸ್ವಾತಂತ್ರ್ಯ ಸಾಧಿಸಲು ಭಾರತದ ಸಂವಿಧಾನವು ಅತ್ಯಂತ ಪ್ರಮುಖ ಪಾತ್ರ ವಹಿಸಿದೆ.

ಪ್ರಸ್ತುತವಾಗಿ ಶಾಹುಮಹಾರಾಜರ ಸುಧಾರಣೆಗಳು, ಧ್ಯೇಯ ಉದ್ದೇಶಗಳು ಹಾಗೂ ಅವರ ಚಿಂತನೆಗಳು ಆಧುನಿಕ ಭಾರತದ ರಾಜಕೀಯ ವ್ಯವಸ್ಥೆಗೆ ಪ್ರೇರಕವಾಗಿವೆ. ಅವರು ಯಾವತ್ತೂ ಭಾರತೀಯರಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಡಾ. ಅನುಪಮಾ ಎಚ್. ಎಸ್., ಛತ್ರಪತಿ ಶಾಹೂ ಮಹಾರಾಜ, ಲಡಾಯಿ ಪ್ರಕಾಶನ, ಗದಗ.
2. ಧನಂಜಯ ಕೀರ್., ಡಾ. ಅಂಬೇಡ್ಕರ್ ಜೀವನ ಮತ್ತು ಸಾಧನೆ, ಮೂಲ:
3. ನಾರಾಯಣ ಗುರು., (2015), ಸಮಾನತೆಯ ಸಂಚಲನ, ರೂಪಾ ಪ್ರಕಾಶನ, ಮೈಸೂರು.
4. ಮಂಗಲಾ ಕಾಳಶ್ರೀ, (1996) ವಿಮೋಚನಾ ಹೋರಾಟಗಳ, ಅನಾರ್ಯ ಪ್ರಕಾಶನ, ಧಾರವಾಡ.
5. ಡಾ. ಚೇಜಿ ಗೌಡ., ವಿಚಾರವಾದಿ ಪೆರಿಯಾರ, ಪೆರಿಯಾರ್ ಮಿಷನ್, ಬೆಂಗಳೂರು.
6. ಪ್ರೊ. ಮರ್ಜಿ ಸದಾಶಿವ., (2008), ಜ್ಯೋತಿಬಾ ಫುಲೆ, ಸಮಿತ್ ಪ್ರಕಾಶ, ಹುನಗುಂದ.
7. ಥೋರೆಟ್ ಸುಖದೇವ್., ಅನು: ಶ್ರೀಪಾದ, ಜಾತಿ, ಲಡಾಯಿ ಪ್ರಕಾಶನ, ಗದಗ.
8. ದಲಿತ್ ಲೀಡರ್ಸ್ ಆ್ಯಂಡ್ ಮೂಮೆಂಟ್ ಇನ್ ಇಂಡಿಯಾ, ಅರೈಸ್ ಪಬ್ಲಿಷರ್ಸ್, (2002) ನ್ಯೂ ದೆಹಲಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.